ಶ್ರೀ ಬಿ.ಎನ್. ವಿಜಯಕುಮಾರ್: ಮಾನ್ಯ ಅಧ್ಯಕ್ಷರೆ, ಜಯನಗರ shoppıng complex ಹತ್ತಿರ ಫುಟ್‌ಪಾತ್‌ನಲ್ಲಿ permanent ಆಗಿ ಅಂಗಡಿಗಳನ್ನು ಹಾಕಿಕೊಂಡಿರುವಂಥವುಗಳು ತುಂಬಾ ಇವೆ. ನಾನು ಹತ್ತಾರು ಬಾರಿ ಈ ಬಗ್ಗೆ ಪೊಲೀಸ್ ಕಮೀಷನರ್‌ರವರಿಗೆ ಮನವಿ ಕೊಟ್ಟಿದ್ದೇನೆ. ಮಹಾನಗರಪಾಲಿಕೆಗೂ ಕೊಟ್ಟಿದ್ದೇನೆ. ಕ್ರಮ ತೆಗೆದುಕೊಂಡಿಲ್ಲ.

ಶ್ರೀ ಸಿದ್ದರಾಮಯ್ಯ: ಆಯಿತು ತೆರವು ಮಾಡಿಸೋಣ. ಅದನ್ನು ತೆರವುಗೊಳಿಸುತ್ತೇವೆ.

ಅಧ್ಯಕ್ಷರು: ಮುಂದಿನದ್ದು, ಹೆಚ್.ಎಸ್. ಪ್ರಕಾಶ್, ಕುಮಾರಸ್ವಾಮಿ, ರೇವಣ್ಣ, ವಗೈರೆ, ವಗೈರೆ, ನೋಡ್ರಿ, ಒಬ್ಬರದ್ದು ಒಂದಕ್ಕಿಂತ ಜಾಸ್ತಿ ಹಾಕಬೇಡಿ.

ಶ್ರೀ ಹೆಚ್.ಎಸ್. ಪ್ರಕಾಶ್: ಉತ್ತರ ಬಂದಿಲ್ಲ.

ಅಧ್ಯಕ್ಷರು: ಉತ್ತರ ಬಂದಿಲ್ಲವೆಂದರೆ, ಉತ್ತರ ಬಂದಾದ ಮೇಲೆ ಕಳುಹಿಸಿಕೊಡುತ್ತೇವೆ.

ವಿಷಯ: ಹಾಸನ ಜಿಲ್ಲೆ ಹಾಸನ ತಾಲ್ಲೂಕು ಕಸಬಾ ಹೋಬಳಿ ಬೂವನಹಳ್ಳಿ ಗ್ರಾಮದಲ್ಲಿ ಕಾನೂನುಬಾಹಿರವಾಗಿ ಖಾಸಗಿಯವರ ಜಮೀನನ್ನು ಟೌನ್ ಪ್ಲಾನಿಂಗ್ ಅನುಮತಿ ಪಡೆಯದೆ ಬಡಾವಣೆ ನಿರ್ಮಿಸುತ್ತಿರುವ ಹಾಗೂ ಹಾಸನ ತಾಲ್ಲೂಕು ಕಸಬಾ ಹೋಬಳಿ ಗ್ಯಾರಹಳ್ಳಿ, ದೊಡ್ಡಕೊಂಡಗೊಳ, ಮಾವಿನಹಳ್ಳಿ ಗ್ರಾಮದ ಕೆರೆ ಮತ್ತು ಕಾಲುವೆಗಳನ್ನು ಮುಚ್ಚಿ ಹಾಕಿ ಕಾನೂನುಬಾಹಿರವಾಗಿ ನಿವೇಶನಗಳನ್ನು ನಿರ್ಮಿಸುತ್ತಿರುವ ಬಗ್ಗೆ.

ಅಧ್ಯಕ್ಷರು: ನೋಡಿರಿ, ಒಬ್ಬರಿಗಿಂತ ಜಾಸ್ತಿ ಹಾಕಬೇಡಿ. ಉತ್ತರ ಬಂದಿಲ್ಲವೇ? ಇದಕ್ಕೆ ಉತ್ತರ ಬಂದಿಲ್ಲ. ಉತ್ತರ ಬಂದ ಮೇಲೆ ಕಳುಹಿಸಿಕೊಡುತ್ತೇವೆ.

ಅಧ್ಯಕ್ಷರು: ಉತ್ತರ ಹೇಳುವುದಾದರೆ ಹೇಳಲಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್: ಮಾನ್ಯ ಅಧ್ಯಕ್ಷರೆ, ನಾನು ಉತ್ತರ ಹೇಳುವುದಕ್ಕೆ ಹೋದರೂ ಬಿಡುವುದಿಲ್ಲ. ಇವರು ಅಷ್ಟು ಉದ್ದವಾದ ಪ್ರಶ್ನೆ ಕೇಳಿದ್ದಾರೆ, ಅದಕ್ಕೆ ಉತ್ತರ ಅಷ್ಟೆ ಇದೆ.

ಅಧ್ಯಕ್ಷರು: ಯಾರು ಬಿಡುವುದಿಲ್ಲವೆಂದು ಹೇಳಿದರು?

ಶ್ರೀ ವಿ. ಶ್ರೀನಿವಾಸ ಪ್ರಸಾದ್: ತಮಗೆ ಹೇಳಿದೆ, ಅವರು ಕೇಳಿರತಕ್ಕಂಥ ಪ್ರಶ್ನೆಗೆ ನಾನು ಉತ್ತರ ಏನು ತಯಾರು ಮಾಡಿದ್ದೇನೆ, ಅದನ್ನು ಹೇಳುವುದಕ್ಕೂ ಕೂಡ ಕಷ್ಟ ಇದೆ ಎಂದು ಹೇಳಿದೆ. ಏಕೆಂದರೆ ತಾವು ತಿಮ್ಮಪ್ಪನವರು, ತಿಮ್ಮಪ್ಪನ ದರ್ಶನ ಮಾಡುವಾಗ ಕೊನೆಯಲ್ಲಿ.....

ಅಧ್ಯಕ್ಷರು: What is your...ಏನು ಮಾತನಾಡುತ್ತಿದ್ದೀರಿ?

ಶ್ರೀ ವಿ. ಶ್ರೀನಿವಾಸ ಪ್ರಸಾದ್: ಮಾನ್ಯ ಅಧ್ಯಕ್ಷರೆ, ನಾನು ತಮಗೆ ಒಂದು ಮನವಿ ಮಾಡಿಕೊಳ್ಳುತ್ತೇನೆ, ತಾವು ಕೇಳಬೇಕು. ನನ್ನ ಅನುಭವವನ್ನು ಕೂಡ ತಮಗೆ...

ಅಧ್ಯಕ್ಷರು: If it is so,

ಶ್ರೀ ವಿ. ಶ್ರೀನಿವಾಸ ಪ್ರಸಾದ್: ಮಾನ್ಯ ಅಧ್ಯಕ್ಷರೆ, ತಿರುಪತಿಯಲ್ಲಿ ದರ್ಶನಕ್ಕೆ ಹೋದಾಗ

ಅಧ್ಯಕ್ಷರು: ಅದೆಲ್ಲ ಬೇಡ, I don't want.

ಶ್ರೀ ವಿ. ಶ್ರೀನಿವಾಸ ಪ್ರಸಾದ್: ಯಾವುದು ಹೇಳಿದರೂ ಬೇಡ. ನೀವು ಹೇಳಿದ್ದು ಮಾತ್ರ ಬೇಕು, ಅಷ್ಟು ಮಾತ್ರ ನಾವು ಹೇಳಬೇಕು. ನಾನು ಏಕೆ ಹೇಳುತ್ತಿದ್ದೇನೆ ಎಂದರೆ...

ಅಧ್ಯಕ್ಷರು: what is this?

ಶ್ರೀ ವಿ. ಶ್ರೀನಿವಾಸ ಪ್ರಸಾದ್: ಯಾವಾಗಲೂ ಕೊನೆಯಲ್ಲಿ calling attention ಬಂದಾಗ ತಾವು ಬಹಳ ಆತುರಾತುರವಾಗಿ.....

ಅಧ್ಯಕ್ಷರು: ಏಕೆಂದರೆ ಇಲ್ಲಿ ಅಷ್ಟು ಬಿದ್ದಿದ್ದಾವೆ. ಬೇಗ ಬೇಗ ಮುಗಿಸಿಕೊಂಡು ಹೋಗಬೇಕು.

ಶ್ರೀ ವಿ. ಶ್ರೀನಿವಾಸ ಪ್ರಸಾದ್: ಬಿದ್ದಿರುವುದಲ್ಲ, ಬೆಳಿಗ್ಗೆಯಿಂದ ಪಾಪ ಸಾಕಾಗಿರುತ್ತದೆ. ಸದನ ಬೆಳಿಗ್ಗೆ 11.00 ಗಂಟೆಗೆ ಪ್ರಾರಂಭವಾದರೆ ರಾತ್ರಿ 8.00 ರಿಂದ 8.30 ವರೆಗೂ ಕೂಡ ನಡೆಯುತ್ತಿರುತ್ತದೆ. ತಮಗೂ ಕೂಡ ಬೆಳಿಗ್ಗೆಯಿಂದ ಕಾರ್ಯಕಲಾಪ ನಡೆಸಿ ಸಾಕಾಗಿರುತ್ತದೆ. ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದು ಕೇಳುವುದಕ್ಕೂ ತಯಾರಿಲ್ಲ. ತಿರುಪತಿ ದರ್ಶನಕ್ಕೆ ಹೋದಾಗ ಕೊನೆಯಲ್ಲಿ ಆತುರಾತುರವಾಗಿ ಎಲ್ಲರನ್ನೂ ನೋಡಿ ನೋಡಿ ಎಂದು ಕಳುಹಿಸಿಬಿಡುತ್ತಾರೆ. ಸಾಕಾಗಿರುತ್ತದೆ, ಅದಕ್ಕೆ ಆ ರೀತಿ ಮಾಡುವುದು ಬೇಡ.

ಅಧ್ಯಕ್ಷರು: ಅದಕ್ಕೆ ನಾನು ನಿಮಗೆ ಒಂದು ಉತ್ತರ ಹೇಳುತ್ತೇನೆ. ಮಾನ್ಯ ಸಚಿವರು ಯಾವಾಗಲೂ specific ಆಗಿ ಉತ್ತರ ಹೇಳಬೇಕು.

ಶ್ರೀ ವಿ. ಶ್ರೀನಿವಾಸ ಪ್ರಸಾದ್: ನಾವು ತಯಾರಿದ್ದೇವೆ. ನಾನು ಕಳೆದ ಪ್ರಶ್ನೆಗೆ specific ಆಗಿ ಉತ್ತರವನು ಹೇಳುವುದಕ್ಕೂ ಬಿಡುವುದಿಲ್ಲ. ನಾನು ಅದನ್ನೇ specific ಆಗಿ ಹೇಳಬೇಕು ಎಂದು ಹೇಳುತ್ತಿದ್ದೇನೆ.

ಅಧ್ಯಕ್ಷರು: What does it mean?

ಶ್ರೀ ವಿ. ಶ್ರೀನಿವಾಸ ಪ್ರಸಾದ್: ಮಾನ್ಯ ಅಧ್ಯಕ್ಷರೆ, No, ನನಗೆ ತಮ್ಮ ಬಗ್ಗೆ ಅಪಾರವಾದ ಗೌರವ ಇದೆ, ತಾವು ಹೇಳಿದ್ದು ಮಾಡಬೇಕಾಗಿದೆ. ನಾನು ಈ ಗಮನ ಸೆಳೆಯುವ ಸೂಚನೆಗೆ specific ಆಗಿ ಉತ್ತರ ಕೊಡುವುದಕ್ಕೆ ತಯಾರಿದ್ದೇನೆ. ನಾನು ಅಂತ ಅಲ್ಲ, ಯಾರೇ ಸಚಿವರಾದರೂ ಕೂಡ ಗಮನ ಸೆಳೆಯುವ ಸೂಚನೆಗೆ ಉತ್ತರ ಕೊಡಬೇಕಾಗಿದೆ. ತಾವೇ ಅದರ ಬಗ್ಗೆ ಚರ್ಚೆ ಮಾಡುವುದು ಬೇಡ, specific ಆಗಿ, ಸಂಕ್ಷಿಪ್ತವಾಗಿ ಉತ್ತರ ಕೊಡಿ ಎಂದು ಹೇಳುತ್ತೀರಿ. ನಾವು ಸಂಕ್ಷಿಪ್ತವಾಗಿ ಉತ್ತರ ಕೊಡುವುದಕ್ಕೆ ತಯಾರಾಗಿ ಬಂದಿರುತ್ತೇವೆ. ಮಾನ್ಯ ಸದಸ್ಯರು ಈ ಪ್ರಶ್ನೆ ಏನು ಕೇಳಿದ್ದಾರೆ, ಬಹಳ ದೊಡ್ಡದಾಗಿ ಕೇಳಿದ್ದಾರೆ. ಉತ್ತರ ಬಂದಿಲ್ಲವೆಂದು ಹೇಳಿದರು. ನಾನು

ಕೊನೆಯಲ್ಲಿ ಒಂದೇ ಒಂದು ಮಾತು ಹೇಳುವುದೇನೆಂದರೆ, ಈ ಸರ್ವೇ ನಂಬರ್‌ಗಳಲ್ಲಿ ಅಕ್ರಮವಾಗಿ ಬಡಾವಣೆಗಳನ್ನು ನಿರ್ಮಿಸುತ್ತಿದ್ದಾರೆ ಎಂದು ಹೇಳಿರುವುದಕ್ಕೆ ಕ್ರಮ ತೆಗೆದುಕೊಳ್ಳುವುದಕ್ಕೆ ಬೂವನಹಳ್ಳಿ ಗ್ರಾಮದಿಂದ ನಿರ್ದಿಷ್ಟವಾಗಿರುವಂತಹ ರೀತಿಯಲ್ಲಿ ಯಾವುದೇ ದೂರುಗಳು ಬಂದಿಲ್ಲ. ಹಾಗಾಗಿ ಈ ಸರ್ವೆ ನಂಬರ್‌ಗಳಲ್ಲಿ ಅಕ್ರಮವಾಗಿ ಬಡಾವಣೆ ನಿರ್ಮಿಸಿರುವ ಬಗ್ಗೆ ಕ್ರಮ ಕೈಗೊಳ್ಳಲು ನಾವು ಈಗಾಗಲೇ ತುರ್ತಾಗಿ ತನಿಖೆ ನಡೆಸಿ ಈ ಅನಧಿಕೃತವಾದಂತಹ ಚಟುವಟಿಕೆಗಳ ವಿರುದ್ಧ ಕ್ರಮ ಕೈಗೊಂಡು ವರದಿ ನೀಡಲು ಕಾರ್ಯಪಾಲಕ ಜಿಲ್ಲಾಪಂಚಾಯತ್ ಇಂಜಿನಿಯರ್ ಹಾಗೂ ಹಾಸನ ಸಹಾಯಕ ನಿರ್ದೇಶಕರ ಜೊತೆಯಲ್ಲಿ ನಗರ ಮತ್ತು ಗ್ರಾಮಾಂತರ ಯೋಜನೆ ಇಲಾಖೆ, ಹಾಸನ ಹಾಗೂ ತಹಶೀಲ್ದಾರ್‌ರವರಿಗೆ ಈಗಾಗಲೇ ನಾವು ತನಿಖೆ ಮಾಡಿ ವರದಿ ಕೊಡಿ ಎಂದು ಆದೇಶ ಕೊಟ್ಟಿದ್ದೇವೆ.

ಅಧ್ಯಕ್ಷರು: ಆಯಿತು, ಬಿಡಿ. No ಚರ್ಚೆ.

ಶ್ರೀ ಹೆಚ್.ಡಿ. ರೇವಣ್ಣ: ಬೋಗಸ್ ದಾಖಲೆ ಮಾಡಿ, ಬ್ರಾಹ್ಮಣರಿಂದ ತೆಗೆದುಕೊಂಡು ವಕ್ಕಲಿಗರಿಗೆ...

(ಗೊಂದಲ)

ಅಧ್ಯಕ್ಷರು: ರೇವಣ್ಣನವರೆ ಹೇಳುವುದನ್ನು ಕೇಳಿ. ನಕಲಿ ಮಾಡಿದ ಸರ್ವೇ ನಂಬರ್ ಯಾವುದು, ಅದನ್ನು ಯಾರು ಮಾಡಿದರು, ಎಲ್ಲಿ ಮಾಡಿದ್ದಾರೆನ್ನುವ ನಿರ್ದಿಷ್ಟವಾದಂತಹ...

ಶ್ರೀ ಹೆಚ್.ಡಿ. ರೇವಣ್ಣ: Details ಹಾಕಿದ್ದೇವೆ. ದಾಖಲೆಗಳು ಇದೆ. ಒಂದೊಂದು ಎಕರೆ ಒಂದೊಂದು ಕೋಟಿ ರೂಪಾಯಿ ಆಗುತ್ತದೆ.

ಅಧ್ಯಕ್ಷರು: ಆ ಡಿಟೈಲ್ಸ್ ಎಲ್ಲಿದೆ ಕೊಡಿ. ಅವರ ಪತ್ರವನ್ನು ಕೊಡಪ್ಪ.

ಶ್ರೀ ಹೆಚ್.ಎಸ್. ಪ್ರಕಾಶ್: 156/1 ಸರ್ವೇ ನಂಬರ್‌ನಲ್ಲಿ ವಂಶವೃಕ್ಷ ಫವತಿಯಾದ ಮೇಲೆ ಕೃಷ್ಣಮೂರ್ತಿ ಎನ್ನುವ ಬ್ರಾಹ್ಮಣ ಜನಾಂಗಕ್ಕೆ ಸೇರಿದವರ

ಖಾತೆಯನ್ನು ತಿಮ್ಮೇಗೌಡ ಎನ್ನುವವರ ಹೆಸರಿಗೆ ವಂಶವೃಕ್ಷ ಬರೆದು ಕೊಡುತ್ತಾರೆ. ಅದರ document ಕೊಡುತ್ತೇವೆ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್: ಅದರ ಬಗ್ಗೆ ಚರ್ಚೆ ಮಾಡಿ ಅದಕ್ಕೆ ಪರಿಹಾರ ಕಂಡುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ: ಈ ಬಡಾವಣೆಗಳಲ್ಲಿ ಬೂವನಹಳ್ಳಿ ಗ್ರಾಮಸ್ಥರಿಂದ ನಿರ್ದಿಷ್ಟವಾಗಿ ಈ ರೀತಿಯಾಗಿದೆ ಎಂದು ಯಾವುದೇ ಅರ್ಜಿಗಳು ಬಂದಿಲ್ಲ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್: ಅವರ ಛೇಂಬರ್‌ಗೆ ಕಳುಹಿಸಿಕೊಡಿ, ತನಿಖೆ ಮಾಡುತ್ತೇವೆ, ಅದಕ್ಕೆ ಪರಿಹಾರ ಕಂಡುಕೊಳ್ಳುತ್ತಾರಲ್ಲ.

ಶ್ರೀ ವಿ. ಶ್ರೀನಿವಾಸ ಪ್ರಸಾದ್: ಈ ವಿಚಾರ ಚರ್ಚೆ ಬಂದಂತಹ ಸಮಯದಲ್ಲಿ ಯಾವುದೇ ತಹಸೀಲ್ದಾರ್ ಆಗಲಿ, ಯಾವುದೇ ಅಧಿಕಾರಿ ಆಗಲಿ ಕಾನೂನು ಬಾಹಿರವಾಗಿ ಮಾಡಿದ್ದರೆ, ಅದನ್ನು ನನ್ನ ಗಮನಕ್ಕೆ ತಂದರೆ...

ಶ್ರೀ ಸಿದ್ದರಾಮಯ್ಯ: Calling attention ನಲ್ಲಿ ಬಹಳ ದೀರ್ಘವಾಗಿ ಚರ್ಚೆ ಮಾಡುವುದಕ್ಕೆ ಎಲ್ಲಿ ಅವಕಾಶ ಇದೆ? ಅವರ statement ಮೇಲೆ clarificaiton ಕೇಳಬಹುದು ಅಷ್ಟೆ.

ಅಧ್ಯಕ್ಷರು: statement ಇಲ್ಲವಲ್ಲ.

ಶ್ರೀ ಸಿದ್ದರಾಮಯ್ಯ: ಉತ್ತರ ಇದೆ.

ಶ್ರೀ ಹೆಚ್.ಡಿ. ರೇವಣ್ಣ: ನಮ್ಮ ಹತ್ತಿರ ಕಾಪಿ ಇಲ್ಲ, ಉತ್ತರ ಕೊಡುವುದಕ್ಕೆ ಹೇಳಿ. ನನ್ನ ವಿಷಯಕ್ಕೂ ಕೊಟ್ಟಿಲ್ಲ, ಇದಕ್ಕೂ ಕೊಟ್ಟಿಲ್ಲ.

ಶ್ರೀ ವಿ. ಶ್ರೀನಿವಾಸ ಪ್ರಸಾದ್: ಅದರಲ್ಲಿ ಯಾವ ಕೃಷ್ಣಮೂರ್ತಿ ಹೆಸರು ಏನಿಲ್ಲ. ನಾನೇ ಓದಿ ಹೇಳಿಬಿಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ: ಇಲ್ಲವೆಂದರೆ ಓದಿ ಹೇಳಿ.

ಅಧ್ಯಕ್ಷರು: ಇಲ್ಲದಿದ್ದರೆ ನಾಳೆ ಕೊಡಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್: ಆಯಿತು.

ಶ್ರೀ ಹೆಚ್.ಡಿ. ರೇವಣ್ಣ: Statement copy ಕೊಡಿ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ರೇವಣ್ಣನವರೆ, ಉತ್ತರ ಇದ್ದರೆ ಕೊಡುತ್ತಾರೆ, ಇಲ್ಲದಿದ್ದರೆ ನಾಳೆ ಕೊಡುತ್ತಾರೆ, ಬಿಡಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್: ನೋಡಿ ಇಲ್ಲಿದೆ, ನೀವು ಕೇಳಿರುವ ಪ್ರಶ್ನೆ, ಅದಕ್ಕೆ ಉತ್ತರ ಕೂಡ ಇದೆ, ತೆಗೆದುಕೊಳ್ಳಿ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್: ನೀವು ಕೇಳಿರುವ ಪ್ರಶ್ನೆಗೆ ಉತ್ತರ ನಾಳೆ ಕೊಡುತ್ತಾರೆ, ಇನ್ನು ಸಮಾಧಾನವಾಗಲಿಲ್ಲವೆಂದರೆ ಅವರ ಛೇಂಬರ್‌ಗೆ ಕರೆದು, ಮಾನ್ಯ ಸದಸ್ಯರ ಜೊತೆ ಚರ್ಚೆ ಮಾಡಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದಕ್ಕೆ ಮಾನ್ಯ ಸಚಿವರು ಒಂದು ಮಾರ್ಗ ಹುಡುಕುತ್ತಾರೆ,

ಅಧ್ಯಕ್ಷರು: ರಮೇಶ್ ಬಾಳಪ್ಪ ನವರೆ ಕೇಳಿ. ನಿಮ್ಮ ಗಮನ ಸೆಳೆಯುವ ಸೂಚನೆಗೆ ಉತ್ತರ ಬಂದಿಲ್ಲ. ಅದನ್ನು ನಾಳೆಗೆ ತೆಗೆದುಕೊಳ್ಳೋಣ. ಈಗ ಶ್ರೀ ಎನ್.ಹೆಚ್. ಕೋನರೆಡ್ಡಿ ಕೇಳಿ, ಅವರು ಇಲ್ಲ. ಬಿ.ಆರ್. ಪಾಟೀಲ್ ಕೇಳಿ.

ವಿಷಯ: ಆಳಂದ ಪಟ್ಟಣ ಹಾಗೂ ಸುತ್ತಮುತ್ತಲ ಹಳ್ಳಿಗಳಲ್ಲಿ ಮಟ್ಕಾ, ಇಸ್ಪೀಟ್ ಕ್ಲಬ್ ಮತ್ತು ಅನಧಿಕೃತ ಚಿಲ್ಲರೆ ಸಾರಾಯಿ ಮಾರಾಟ ನಡೆಯುತ್ತಿರುವ ಬಗ್ಗೆ

ಶ್ರೀ ಬಿ.ಆರ್. ಪಾಟೀಲ್ (ಆಳಂದ): ಮಾನ್ಯ ಅಧ್ಯಕ್ಷರೆ, ಆಳಂದ ಪಟ್ಟಣ ಹಾಗೂ ಸುತ್ತಮುತ್ತಲ ಹಳ್ಳಿಗಳಲ್ಲಿ ಮಟ್ಕಾ, ಇಸ್ಪೀಟ್ ಕ್ಲಬ್ ಮತ್ತು ಅನಧಿಕೃತ ಚಿಲ್ಲರೆ ಸಾರಾಯಿ ಮಾರಾಟ ನಡೆಯುತ್ತಿರುವ ಬಗ್ಗೆ ಮಾನ್ಯ ಗೃಹ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಕೆ.ಜಿ. ಜಾರ್ಜ್ (ಗೃಹ ಸಚಿವರು): ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆಯನ್ನು ಪಡೆದು ಉತ್ತರವನ್ನು ನೀಡುತ್ತೇನೆ. ಆಳಂದ ಪಟ್ಟಣ ಹಾಗೂ ಸುತ್ತಮುತ್ತಲ ಹಳ್ಳಿಗಳಲ್ಲಿ ಮಟ್ಕಾ, ಇಸ್ಪೀಟ್ ಕ್ಲಬ್ ಮತ್ತು ಅನಧಿಕೃತ ಚಿಲ್ಲರೆ